# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **406** |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಇತ್ತೀಚೆಗೆ 2400 ಚದರಿ ಅಡಿ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಸಿ ವಿನಾಯಿತಿ ನೀಡಿದೆ; ಇದರಲ್ಲಿ ನಿವೇಶನ ಪದದ ಪರಿಭಾಷೆಯೇನು; | ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2004ರ ಕಲಂ 241(7)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ 2400 ಚದರಡಿವರೆಗಿನ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗಿರುವ G+3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್+4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳು, ಪೂರ್ಣಗೊಂಡು ವಿದ್ಯುತ್ ಸಂಪರ್ಕಕ್ಕಾಗಿ ದಿನಾಂಕ:31.05.2026ರ ಒಳಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿಗೆ ಸ್ವಾಧೀನಾನುಭ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.<br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 2(8)ರಲ್ಲಿ ನಿವೇಶನದ ಅರ್ಥವನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.<br>"Plot means a continuous portion of land held in one ownership:<br>ಕಟ್ಟಡ ಉಪವಿಧಿ-2003ರ ನಿಯಮ 2.66 ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.<br>"Plot or site" means a continuous portion of land be demarcated by definite boundary including the land within the curtilage of the building and forming its appurtenance, such as out buildings, yard, Court, open space, and garden attached thereto of intended to be occupied therein. |
| ಆ) | ಒಸಿಯನ್ನು ಕಟ್ಟಡಕ್ಕೆ ನೀಡಲಾಗುತ್ತದೆ; ಆದರೆ ಇಲ್ಲಿ ನಿವೇಶನ ಪದವನ್ನು ಸೇರಿಸಿರುವ ಔಚಿತ್ಯವೇನು; | ವಲಯ ನಿಯಮಾವಳಿಯ ಅವಕಾಶದಂತೆ ರಸ್ತೆ ಅಗಲ ಮತ್ತು ನಿವೇಶನ ವಿಸ್ತೀರ್ಣಕ್ಕೆ ಅನುಗುಣವಾಗಿ ಕಟ್ಟಡಗಳಿಗೆ ಅನುಪಾತ(Far) ಹಾಗೂ ಅವರಿಸುವಿಕೆಯನ್ನು (Coverage) ನಿರ್ಧರಿಸಲಾಗುತ್ತದೆ. ಕಡಿಮೆ ವಿಸ್ತೀರ್ಣದ ನಿವೇಶನದಲ್ಲಿ ಹೆಚ್ಚು ವಿಸ್ತೀರ್ಣದ ಕಟ್ಟಡ ಅಥವಾ ಹೆಚ್ಚಿನ ವಿಸ್ತೀರ್ಣದ ನಿವೇಶನಗಳಲ್ಲಿ ಎಫ್.ಎ.ಆರ್ ಲಭ್ಯವಿದ್ದರೂ ಸಹ ಕಡಿಮೆ ವಿಸ್ತೀರ್ಣದ ಕಟ್ಟಡ ನಿರ್ಮಾಣ ಮಾಡಲು ಅವಕಾಶವಿರುತ್ತದೆ.<br>ಆದ್ದರಿಂದ, ಕಟ್ಟಡದ ವಿಸ್ತೀರ್ಣವನ್ನು ಪರಿಗಣಿಸಿ ಓ.ಸಿ.ಗೆ ವಿನಾಯಿತಿ ನೀಡಿದಲ್ಲಿ ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸಲು ಗೊಂದಲ ಉಂಟಾಗುತ್ತದೆ ಮತ್ತು ಸದರಿ ಮಾನದಂಡವನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ನಿವೇಶನದ ವಿಸ್ತೀರ್ಣದ ಆಧಾರದ ಮೇಲೆ ಓಸಿ ಇಂದ ವಿನಾಯಿತಿ ನೀಡುವುದು ಹೆಚ್ಚು ಸೂಕ್ತವಾಗಿರುತ್ತದೆ.<br>ಈ ಹಿನ್ನೆಲೆಯಲ್ಲಿ, ಸರ್ಕಾರವು ಸಾರ್ವಜನಿಕರ ಅನುಕೂಲತೆ ದೃಷ್ಟಿಯನ್ನು ಪರಿಗಣಿಸಿ 2400 ಚ.ಅಡಿ ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ ನಿರ್ಮಿಸುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ ಹಾಗಾಗಿ ಸರ್ಕಾರದ ಆದೇಶದಲ್ಲಿ ನಿವೇಶನ ಪದ ಸೇರಿಸಿರುವುದು ಔಚಿತ್ಯ ಪೂರ್ಣವಾಗಿದೆ. |

| | | |
|---|---|---|
| ಇ) | ವಿದ್ಯುತ್ ಸಂಪರ್ಕ ಪಡೆಯಲು ಒ.ಸಿ. ವಿನಾಯಿತಿ ನೀಡಿರುವುದರಿಂದ ಇಂಧನ ಇಲಾಖೆಯು ಅರ್ಜಿದಾರರಿಂದ ಯಾವೆಲ್ಲಾ ದಾಖಲೆಗಳನ್ನು ಪಡೆದು ವಿದ್ಯುತ್ ಸಂಪರ್ಕವನ್ನು ನೀಡಬೇಕು: | ವಸತಿ ಮನೆಗಳಿಗೆ ಸಂಬಂಧಿಸಿದಂತೆ KERC – Conditions of Supply ನಿಮಾವಳಿಗಳಂತೆ ಈ ಕೆಳಕಂಡ ದಾಖಲಾತಿಯನ್ನು ಪಡೆದು ತಾತ್ಕಾಲಿಕ/ಖಾಯಂ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ:<br>1) ಕಟ್ಟಡ ನಿರ್ಮಾಣ ಪರವಾನಿಗೆ/ಅನುಮೋದಿತ ನಕ್ಷೆ<br>2) ಮಾಲೀಕತ್ವದ ಪುರಾವೆ<br>3) ಗುರುತಿನ ಪುರಾವೆ<br>4) ಅರ್ಜಿದಾರರು ಆವರಣದ ಮಾಲೀಕರಾಗದಿದ್ದಲ್ಲಿ, Indemnity Bond. |
| ಈ) | ಗ್ರಾಮ ಪಂಚಾಯಿತಿಯಿಂದ ಯಾವುದೇ ದಾಖಲೆ ಪಡೆಯದೇ ಸದರಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಿದರೆ ಅನಧಿಕೃತ ಕಟ್ಟಡಗಳು ಕೂಡ ವಿದ್ಯುತ್ ಸಂಪರ್ಕ ಪಡೆಯುವ ಸಾಧ್ಯತೆ ಇರುವುದಿಲ್ಲವೇ | ಪ್ರಸ್ತುತ, ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಇಂಧನ ಇಲಾಖೆಯಿಂದ ಹೊರಡಿಸಿರುವ ಆದೇಶಗಳನ್ವಯ, 2400 ಚದರ ಅಡಿಗಳವರೆಗಿನ ಅಳತೆಯ ನಿವೇಶನಗಳಲ್ಲಿ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ನಿರ್ಮಿಸಲಾಗಿರುವ ಜಿ+3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳು 31.05.2026 ರೊಳಗೆ ಪೂರ್ಣಗೊಂಡು, ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ 15.08.2026 ರ ಒಳಗೆ ಅರ್ಜಿ ಸಲ್ಲಿಸಿರುವ ವಾಸದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ ಸಲ್ಲಿಸುವುದರಿಂದ ಒಂದು ಬಾರಿಯ ವಿನಾಯಿತಿ ನೀಡಲಾಗಿದೆ.<br>ವಿನಾಯಿತಿ ಇಲ್ಲದ ಕಟ್ಟಡಗಳಿಂದ OC/CC ಪಡೆದು ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿರುತ್ತದೆ |
| ಉ) | ರೈತರ ವಾಸದ ಕಟ್ಟಡ, ಕೃಷಿ ಚಟುವಟಿಕೆಗೆ ಪೂರಕವಾದ ಕಟ್ಟಡ. ಕೋಳಿ ಫಾರಂ ಮತ್ತು ಪಶುಪಾಲನಾ ಲೆಡ್‌ಗಳಿಗೂ ಒಸಿ ವಿನಾಯಿತಿ ನೀಡಲಾಗಿದೆ: ಅರ್ಜಿದಾರರು ಸದರಿ ವಿನಾಯಿತಿಯಡಿ ವಿದ್ಯುತ್ ಸಂಪರ್ಕ ಪಡೆಯಲು ಯಾವೆಲ್ಲಾ ದಾಖಲಾತಿಯನ್ನು ಇಂಧನ ಇಲಾಖೆಗೆ ನೀಡಬೇಕು? (ವಿವರ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ 556 ಇಇಬಿ 2026 ಬೆಂಗಳೂರು ದಿನಾಂಕ: 22.06.2026 ಮತ್ತು ತಿದ್ದುಪಡಿ ಆದೇಶ ದಿನಾಂಕ 4.7.2026 ರಂತೆ ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆ, ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ ರೇಷ್ಮೆ ಗೂಡಿನ ಮನೆ - ಇವುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ, ವಿನಾಯಿತಿ ನೀಡಿ ಆದೇಶಿಸಿದೆ.<br>KERC – Conditions of Supply ನಿಮಾವಳಿಗಳ ಕಂಡಿಕೆ 4.0 ರಂತೆ ಈ ಕೆಳಕಂಡ ದಾಖಲಾತಿಯನ್ನು ಪಡೆದು ತಾತ್ಕಾಲಿಕ/ಖಾಯಂ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ:<br>a) ಆವರಣದ ಮಾಲೀಕತ್ವದ ದೃಢೀಕರಣ ಅಥವಾ ವಾಸಾಧಿಕಾರದ ದೃಢೀಕರಣ<br>b) ಅನ್ವಯವಾಗುವ ಕಡೆಗಳಲ್ಲಿ ಸ್ಥಳೀಯ ಪ್ರಾಧಿಕಾರದಿಂದ ನೀಡಲ್ಪಟ್ಟ ಸಾಮಾನ್ಯ ಪರವಾನಗಿ (General License).<br>c) ಪಾಲುದಾರಿಕೆ ಸಂಸ್ಥೆಯಾದಲ್ಲಿ, ಪಾಲುದಾರಿಕೆ ಒಪ್ಪಂದ ಪತ್ರ (Partnership Deed).<br>d) ಅರ್ಜಿದಾರರು ಆವರಣದ ಮಾಲೀಕರಾಗಿರದಿದ್ದಲ್ಲಿ, Indemnity Bond.<br>e) ಅರ್ಜಿದಾರರ ಶಾಶ್ವತ ನಿವಾಸ ವಿಳಾಸದ ದೃಢೀಕರಣ ಹಾಗೂ ಪ್ಯಾನ್ (PAN) ಸಂಖ್ಯೆ, ಅವಶ್ಯಕತೆ ಇದ್ದಲ್ಲಿ, ಪಡೆದು ಅಗತ್ಯ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಎನರ್ಜಿ 208 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಮತ್ತು ಪ್ರವಾಸೋದ್ಯಮ ಸಚಿವರು